ಯಾರು? ಇದೇ ಕಮಿಶನ್ ಮಂದಿ. ಅವರನ್ನು ತಮ್ಮ ಹಿತಕ್ಕೆ ಬಲಿಕೊಟ್ಟವರು! ಏನಂತೀ?'' ಎಂದ ಹಸನ್.

ನಾನು ಸುಮ್ಮನಿದ್ದೆ.

``ಪ್ರಯೋಜನವಿಲ್ಲದ ಮಾತಾದರೂ ಮಾತಾಡಿ ಪ್ರಯೋಜನವಾಯಿತು! ಹದಿಮೂರು ಬೋರ್ಡು ಬಂತು ನೋಡು'' ಎಂದ ಹಸನ್.

``ಇಳಿಯುವ ಮೊದಲು ನಿನಗೆ ನನ್ನ ಸಣ್ಣ ಇಂಟರ್ವ್ಯೂ. ಆಗಬಹುದಾ?'' ನಕ್ಕು ಕೇಳಿದ.

ಸರಿ ಎಂದೆನ್ನುತ್ತ ನಕ್ಕೆ ನಾನು.

``ಬುದ್ಧಿವಂತ ನೀನು. ನನ್ನ ಇಂಟರ್ವ್ಯೂನಲ್ಲಿ ಪಾಸಾಗುತ್ತೀಯೋ ನೋಡೋಣ. ನಾವು ಸಾಮಾನ್ಯ ಹಿಂದೂಸ್ತಾನಿ ಪಾಕಿಸ್ತಾನಿಗಳಿಗೆ ಹೆಚ್ಚು ಭೇದ ಇಲ್ಲ. ವೈರ ಇಲ್ಲ. ವೈರತ್ವ ಹೊಡೆದಾಟ ಎಲ್ಲ ಸ್ಥಾಪಿತ ಹಿತಾಸಕ್ತಿಗಳ ಮತ್ತು ತಲೆ ಕೆಟ್ಟವರ ಆಟ. ಇದು ಎಲ್ಲ ಹಿಂದುಸ್ತಾನಿಗಳಿಗೆ ಪಾಕಿಸ್ತಾನಿಗಳಿಗೆ ಪ್ರಚಾರ ಮಾಡಬೇಕು. ಹೇಗೆ ಮಾಡಬಹುದು? ಯೋಚಿಸಿ ಹೇಳು ರೈಲು ಬಿಡಬೇಡ'' ಅಂದ.

ಎರಡು ಕ್ಷಣ ಯೋಚಿಸಿದೆ. ಆತ ರೈಲು ಬಿಡಬೇಡ ಅಂದಿದ್ದು ಮನಃಪಟಲದಲ್ಲಿ ಕಿಡಿ ಹಾರಿಸಿತು.

``ಎರಡು ರೈಲು ಬಿಡಬೇಕು. ಒಂದು ಸಾವಿರ ಜನರನ್ನು ಹೊತ್ತ ಪಾಕಿಸ್ತಾನಿ ರೈಲನ್ನು ಭಾರತದಲ್ಲಿ ಹಾಗೂ ಭಾರತೀಯರನ್ನು ಹೊತ್ತ ರೈಲನ್ನು ಪಾಕಿಸ್ತಾನದಲ್ಲಿ. ಒಂದು ತಿಂಗಳು ಎರಡನ್ನೂ ದೇಶ ಸುತ್ತುವಂತೆ ಹೇಳಬೇಕು. ಎರಡೂ ದೇಶಗಳ ಜನರಿಗೆ ಬೆರೆಯುವ ಅವಕಾಶ ಮಾಡಿಕೊಡಬೇಕು. ವ್ಯಾಪಕ ಪ್ರಚಾರ ಕೊಡಬೇಕು. ಸ್ಥಳೀಯ ಊಟ ತಿಂಡಿ ತಿನ್ನಿಸಬೇಕು. ಕಲಾಪ್ರದರ್ಶನಗಳನ್ನು ಆಯೋಜಿಸಬೇಕು. ಕೃಷಿಕಾರ್ಯದಲ್ಲಿ ಸೇರಿಸಿಕೊಳ್ಳಬೇಕು. ಕ್ರಿಕೆಟ್ ಆಡಿಸಬೇಕು. ಆಮೇಲೆ ತಮ್ಮ ದೇಶಕ್ಕೆ ವಾಪಸಾದವರಲ್ಲಿ ಎಲ್ಲಿಯಾದರೂ ವೈರತ್ವ ಕಂಡಿರಾ ಎಂದು ಕೇಳಬೇಕು'' ಎಂದೆ ನಾನು.

``ಐಡಿಯಾ ಒಳ್ಳೇದಿದೆ, ಆದರೆ ಕಷ್ಟ ಉಂಟು'' ಎಂದ ಹಸನ್, ``ಅಲ್ಲಿ ನಿನ್ನ ಸ್ಟಾಪ್ ಬಂತು. ಸುಲಭದಲ್ಲಿ ಪ್ರಯಾಣ ಮುಗಿಯಿತು ನೋಡು'' ಎಂದ.

ಮೀಟರ್ ನೋಡಿ ಹಣಕೊಟ್ಟು ನಾನು, ``ಸುಲಭದ ಇನ್ನೊಂದು ಮಾರ್ಗ ಕೂಡ ಇದೆ'' ಎಂದೆ.

``ಏನು ಏನು... ಹೇಳು. ಗಾಡಿ ಸ್ವಲ್ಪ ನಿಲ್ಲಿಸುತ್ತೇನೆ'' ಎಂದ ಹಸನ್, ``ನನಗೆ ಇವೆಲ್ಲ ಬೇರೆ ಪ್ರಯಾಣಿಕರಲ್ಲಿ ಹೀಗೆಯೇ ಮಾತಾಡಲು ಬೇಕಾಗುತ್ತೆ. ಹೇಳು ಹೇಳು'' ಎಂದು ಕಾರು ನಿಲ್ಲಿಸಿದ.

``ವೈರತ್ವ ಸಾಧಿಸಬೇಕು. ನಿರ್ನಾಮ ಮಾಡಬೇಕು ಎಂದೆಲ್ಲ ಬೊಬ್ಬೆ ಹಾಕುವ ಎರಡೂ ದೇಶದವರನ್ನು ಮೂರು ವರ್ಷಕ್ಕೆ ಗಲ್ಫಿನಲ್ಲಿ ಕಟ್ಟಡ ಕಾಮಗಾರಿಗೆ ಕಳಿಸಬೇಕು. ಉರಿಬಿಸಿಲಿಗೆ ವೈರತ್ವ ಎಲ್ಲ ಒಣಗಿ ಹೋಗುತ್ತೆ'' ಮಾವ ಆಗಾಗ ಹೇಳುತ್ತಿದ್ದ ಡಯಲಾಗನ್ನು ನನ್ನದೇ ಎಂಬಂತೆ ತೇಲಿಸಿಬಿಟ್ಟೆ!

ಜೋರಾಗಿ ನಕ್ಕ ಹಸನ್, ``ಓಹೋ ಭಾಯಿ... ತುಮ್ ಮೆರಾ ದಿಲ್ ಜೀತ್ ಲಿಯಾ!...'' ಎನ್ನುತ್ತ ಕಾರು ಸ್ಟಾರ್ಟ್ ಮಾಡಿ ನಗುತ್ತ ಹೊರಟುಹೋದ.

**ಗೋಪೀನಾಥ ರಾವ್**

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.